## ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

**ದಿನಾಂಕ: 15–08–2024**

# ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ

# ಸಚಿತ್ರಗಳ ಒಂದು ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ಈ ಕೆಳಕಂಡ ಕಾರ್ಯಕ್ರಮದಂತೆ ಧ್ವಜ ಸ್ಥಂಭದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.


ಕಾರ್ಯಕ್ರಮಗಳ ಪಟ್ಟಿ

ದಿನಾಂಕ: 15-08-2024 - ಗುರುವಾರ

ಧ್ವಜಸ್ತಂಭ ಪೂಜೆ : ಬೆಳಿಗೆ 08-55 ಗಂಟೆ

ಧ್ವಜಾರೋಹಣ : ಶ್ರೀ ಕೆ.ಬಿ. ಚಟ್ಟೇಗೌಡ, ಅಧ್ಯಕ್ಷರವರಿಂದ

ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿ: ಶ್ರೀ ಎಮ್. ಶಂಕರಪ್ಪ, ಕಾರ್ಯದರ್ಶಿಯವರಿಂದ

ಹಿರಿಯ ಸದಸ್ಯರ ಭಾಷಣ:
1) ಶ್ರೀ ಎಸ್.ಪಿ. ನಾಯಕ್, ಹಿರಿಯ ಸದಸ್ಯರವರಿಂದ
2) ಶ್ರೀ ಎಮ್. ಕೆ. ಗಣಪತಿ, ಹಿರಿಯ ಸದಸ್ಯರವರಿಂದ
3) ಶ್ರೀ ಚಂದ್ರಕಾಂತ ಎನ್. ಭಂಡಾರಿ, ವಲಯ ಸಂಘಟನಾ ಕಾರ್ಯದರ್ಶಿಯವರಿಂದ

ಅಧ್ಯಕ್ಷೀಯ ಭಾಷಣ : ಶ್ರೀ ಕೆ.ಬಿ. ಚಟ್ಟೇಗೌಡ, ಅಧ್ಯಕ್ಷರವರಿಂದ

ವಂದನಾರ್ಪಣೆ : ಶ್ರೀ ಕೆ.ಸಿ.ವಿ. ಮಾನೆ, ವಲಯ ಸಂಘಟನಾ ಕಾರ್ಯದರ್ಶಿಯವರಿಂದ

ನಿರೂಪಣೆ : ಶ್ರೀ ಎ.ಕೆ. ತಿಮ್ಮಯ್ಯ, ವಲಯ ಸಂಘಟನಾ ಕಾರ್ಯದರ್ಶಿಯವರಿಂದ

ಕಾರ್ಯಕ್ರಮದ ನಂತರ ಲಘು ಉಪಹಾರ

ವಿಶೇಷ ಸೂಚನೆ: ಎಲ್ಲಾ ಸದಸ್ಯರುಗಳು ಬೆಳಿಗೆ 08-50 ಗಂಟೆಗೆ ಸಂಘದ ಆವರಣದಲ್ಲಿರುವ ಧ್ವಜ ಸ್ತಂಭದ ಬಳಿ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೆ.

ಸಂಘದ ಧ್ವಜ ಸ್ಥಂಭದ ಆವರಣದಲ್ಲಿ ರಾಷ್ಟ್ರಪಿತ ಹಾಗೂ ಸಂವಿಧಾನ ಶಿಲ್ಪಿ ರವರುಗಳ ಭಾವ ಚಿತ್ರಗಳಿಗೆ ಧ್ವಜ ಸ್ಥಂಭದ ಬಳಿ ಪೂಜಾ ನಮನ ಸಲ್ಲಿಸಲಾಯಿತು.


ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023

ಆಮಂತ್ರಣ ಪತ್ರಿಕೆ

ಸ್ವಾತಂತ್ರ್ಯ ದಿನಾಚರಣೆ

ದಿನಾಂಕ: 15-08-2024 – ಗುರುವಾರ

ತ್ರಿವರ್ಣ ಧ್ವಜಾರೋಹಣ ಕಾರ್ಯಕ್ರಮವನ್ನು ಸಂಘದ ಧ್ವಜ ಸ್ತಂಭದ ಬಳಿ ಹಮ್ಮಿಕೊಳ್ಳಲಾಗಿದೆ.

ತಾವುಗಳೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಕೋರಿಕೆ.

ಅಧ್ಯಕ್ಷರು ಮತ್ತು ಪದಾಧಿಕಾರಿಗಳು

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ದಿನಾಂಕ: 15–08–2024 ರಂದು ಗುರುವಾರದ ಬೆಳಿಗ್ಗೆ 09–00 ಗಂಟೆಯಿಂದ ಸಂಘದ ಧ್ವಜ ಸ್ಥಂಭದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.





ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಿರಿಯ ಸದಸ್ಯರೊಂದಿಗೆ ಮಹಾತ್ಮ ಗಾಂಧೀಜಿ ಹಾಗೂ ಡಾ|| ಬಿ. ಆರ್. ಅಂಬೇಡ್ಕರ್ ರವರುಗಳ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ದೀಪ ಬೆಳಗಿಸಿದರು. ನಂತರ ರಾಷ್ಟ್ರ ಧ್ವಜಕ್ಕೆ ವಂದನೆ ಸಲ್ಲಿಸಲಾಯಿತು.

















ಫೋಟೋ ಪೂಜೆ ಹಾಗೂ ಜ್ಯೋತಿ ಬೆಳಗಿಸಿದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ನೆರೆದಿದ್ದ ಸಂಘದ ಪದಾಧಿಕಾರಿಗಳು, ಹಿರಿಯ/ಕಿರಿಯ ಸದಸ್ಯರು ಹಾಗೂ ಇತರರೂ ಸಹ ಧ್ವಜಕ್ಕೆ ವಂದನೆ ಸಲ್ಲಿಸಿದರು. ಎಲ್ಲರೂ ರಾಷ್ಟ್ರಗೀತೆ ನುಡಿಸಿ, ಜೈಹಿಂದ್, ಭಾರತ್ ಮಾತಾಕೀ ಜೈ, ವಂದೇ ಮಾತರಂ ಘೋಷಣೆಗಳನ್ನು ಮೊಳಗಿಸಿದರು.















ಸಂಘದ ಕಾರ್ಯದರ್ಶಿಗಳಾದ ಶ್ರೀ ಎಮ್. ಶಂಕರಪ್ಪ ರವರು ಕಾರ್ಯಕ್ರಮಕ್ಕೆ ಆಗಮಿಸಿದ್ದ ಹಿರಿಯ/ಕಿರಿಯ ಸದಸ್ಯರೊಂದಿಗೆ ಎಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಕ್ರಾಂತಿಕಾರಿಗಳ ಪ್ರಾಣಾರ್ಪಣೆ, ಬಲಿದಾನ ಮತ್ತು ದೇಶ ಭಕ್ತರ ಹೋರಾಟದ ಫಲವಾಗಿ ಸ್ವಾತಂತ್ರ್ಯ ಲಭಿಸಿದ ಬಗ್ಗೆ ತಿಳಿಸಿ, ಸ್ವಾತಂತ್ರ್ಯದ ಇತಿಹಾಸವನ್ನು ಚುಟುಕಾಗಿ ಮನಮಿಡಿಯುವಂತೆ ವಿವರಿಸಿದರು..















ಸಂಘದ ಹಿರಿಯ ಸದಸ್ಯರಾದ ಶ್ರೀ ಎಸ್. ಪಿ. ನಾಯಕ್ ರವರು ತಮ್ಮ ಮುಖ್ಯ ಅತಿಥಿಗಳ ಭಾಷಣದಲ್ಲಿ ಸ್ವಾತಂತ್ರ್ಯ ಸುಲಭವಾಗಿ ಧಕ್ಕಿದ್ದಲ್ಲ, ಹೋರಾಟಗಾರರ ಸತ್ಯ, ಅಹಿಂಸೆ, ಶಾಂತಿ, ಸೆರೆವಾಸಗಳಂಥಹ ಪರಿಶ್ರಮದ ಫಲವಾಗಿ ಧಕ್ಕಿದ್ದು. ದುಡಿಯದೇ ಯಾವುದನ್ನೂ ಉಚಿತವಾಗಿ ಪಡೆಯಬಾರದೆಂದು ವಿವರಿಸಿದರು.







ಸಂಘದ ಹಿರಿಯ ಸದಸ್ಯರು ಹಾಗೂ ಪ್ರಸ್ತುತ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಚಂದ್ರಕಾಂತ್ ಎನ್. ಭಂಡಾರೆಯವರು ತಮ್ಮ ಮುಖ್ಯ ಅತಿಥಿಗಳ ಭಾಷಣದಲ್ಲಿ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು ಈ ಚಳವಳಿಯಲ್ಲಿ ನೀಡಿದ ಕೊಡುಗೆಯನ್ನು ಸ್ಮರಿಸಿದರು





ಸಂಘದ ಮತ್ತೊಬ್ಬ ಹಿರಿಯ ಸದಸ್ಯರಾದ ಶ್ರೀ ಎಮ್.ಕೆ. ಗಣಪತಿರವರು ತಮ್ಮ ಮುಖ್ಯ ಅತಿಥಿಗಳ ಭಾಷಣದಲ್ಲಿ ಕೋಟ್ಯಾಂತರ ಸ್ವಾತಂತ್ರ್ಯ ಸಂಗ್ರಾಮದ ಸಮರ ವೀರರ ತ್ಯಾಗ, ಬಲಿದಾನಗಳನ್ನು ಮನ ಮುಟ್ಟುವಂತೆ ವಿವರಿಸಿ, ಕರ್ನಾಟಕದ ಸ್ವಾತ್ರಂತ್ರ್ಯ ಸಂಗ್ರಾಮಗಾರರ ಬಗ್ಗೆ ಮಾಹಿತಿ ನೀಡಿದರು.







ಸಂಘದ ಸದಸ್ಯರಾದ ಶ್ರೀ ಹೆಚ್.ಎಸ್. ವೆಂಕಟೇಶ್ ರವರು ಸಭಿಕರಲ್ಲಿ ರೋಮಾಂಚನವಾಗುವ ರೀತಿಯಲ್ಲಿ ದೇಶ ಭಕ್ತಿ ಗೀತೆಯನ್ನು ಮೊಳಗಿಸಿದರು.









ಸಂಘದ ಕಾರ್ಯಕಾರೀ ಸಮಿತಿ ಸದಸ್ಯರಾದ ಶ್ರೀ ಎಮ್. ಎನ್. ಮಂಜೇಗೌಡರವರು ತಾವೇ ರಚಿಸಿದ ರಾಷ್ಟ್ರ ಪ್ರೇಮದ ಕವನವನ್ನು ಸುಶ್ರಾವ್ಯವಾಗಿ ಭಕ್ತಿ ಪರವಶವಾಗುವ ರೀತಿಯಲ್ಲಿ ವಾಚಿಸಿದರು.



ಈ ಸಮಾರಂಭದ ರೂವಾರಿ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಈ ಕಾರ್ಯಕ್ರಮದ ಸಂಪೂರ್ಣ ಮಾಹಿತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ ಇಂದಿನ ಯುವ ಪೀಳಿಗೆಗೆ ದೇಶಭಕ್ತಿಯ ಬಗ್ಗೆ ಹಿತನುಡಿಗಳನ್ನಾಡಿದರು.



























ಸಂಘದ ವಲಯ ಸಂಘಟನಾ ಕಾರ್ಯದರ್ಶಿಯಯವರಾದ ಶ್ರೀ ಕೆ.ಸಿ.ವಿ. ಮಾನೆ ರವರು ಸರಳವಾಗಿ ಧ್ವಜಾರೋಹಣ ಕಾರ್ಯಕ್ರಮದ ಸಮಾರಂಭಕ್ಕೆ ಆಗಮಿಸಿದ್ದ ಎಲ್ಲರಿಗೂ ವಂದನಾಪೂರ್ವಕ ವಂದನೆಗಳನ್ನು ಸಲ್ಲಿಸಿದರು.



ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಎ. ಕೆ. ತಿಮ್ಮಯ್ಯ ರವರು ಧ್ವಜಾರೋಹಣಾ ಕಾರ್ಯಕ್ರಮದ ನಿರೂಪಣಾ ಕಾರ್ಯವನ್ನು ತಮ್ಮದೇ ಶೈಲಿಯಲ್ಲಿ ಅರ್ಥಗರ್ಭಿತವಾಗಿ ಮನಮುಟ್ಟುವಂತೆ ಅಚ್ಚುಕಟ್ಟಾಗಿ ಶ್ಲಾಘನೀಯ ವಿವರಣೆಗಳ ಮೂಲಕ ನಿರ್ವಹಿಸಿದರು.



ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಘಮಘಮಿಸುವ ಸ್ವಾಧಿಷ್ಟ ಉಪಹಾರವನ್ನು ಏರ್ಪಡಿಸಲಾಗಿತ್ತು.


























ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಎಲ್ಲರಿಗೂ ವ್ಯವಸ್ಥೆ ಮಾಡಲಾಗಿದ್ದ ಸ್ವಾಧಿಷ್ಟವಾದ ಉಪಾಹಾರವನ್ನು ಸೇವಿಸಿ, ಸಂಭ್ರಮಿಸಿ, ಸಂತೋಷದಿಂದ ನಿರ್ಗಮಿಸಿದರು. ಇದರೊಂದಿಗೆ ಕಾರ್ಯಕ್ರಮ ಸಂಪನ್ನ ವಾಗಿರುತ್ತದೆ.

ಸಂಘದ ಖಜಾಂಚಿಯವರಾದ ಶ್ರೀ ಕೆ.ಹೆಚ್. ಜಗದೀಶ್ ಮತ್ತು ರಾಜ್ಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಎನ್. ಎಮ್. ರಾಮಲಿಂಗಪ್ಪ ರವರುಗಳ ಮೇಲ್ವಿಚಾರಣೆಯಲ್ಲಿ ಉಪಹಾರ ಏರ್ಪಡಿಸಲಾಗಿತ್ತು.

ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಸಿ. ಕಿರಣ್ ರವರು ಕಾರ್ಯಕ್ರಮದ ಫೋಟೋ ಹಾಗೂ ವಿಡಿಯೋಗಳನ್ನು ಅಚ್ಚುಕಟ್ಟಾಗಿ ಸೆರೆಹಿಡಿದು ನಿರ್ವಹಿಸಿದರು.

NAMASTE

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

* * * * *